2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

S.C. No.186/2021

ದೋ.ಸಾ. 1
ಫ್ರಾ.ಸಾ. 1
ಪ್ರ.ವ.ಬೊ.ದಿನಾಂಕ. 01-02-2023

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ರವಿರಾಜ್ |
| ತಂದೆ / ಗಂಡನ ಹೆಸರು | - | ಪಾಂಡಿಯನ್ |
| ವಯಸ್ಸು | - | 55 |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ ಸ್ಥಳ | - | ದಾವಣಗೆರೆ |

ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಲಾಗಿರುತ್ತದೆ.
ಸಾಕ್ಷಿಯ ವಿಚಾರಣೆಯನ್ನು ಇನ್ ಕಾಮರಾದ ಮೂಲಕ ತೆಗೆದುಕೊಳ್ಳಲಾಯಿತು.
ಮುಖ್ಯ ವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾ.ಸಾ.16 ನನ್ನ ಹೆಂಡತಿ. ಚಾ.ಸಾ.15 ನನ್ನ ಮಗಳು. ನನಗೆ ಚಾ.ಸಾ.17 ರಿಂದ 19 ರವರ ಪರಿಚಯ ಇರುತ್ತದೆ. ನನಗೆ ಈಗ ವಿಸಿಯಲ್ಲಿ ತೋರಿಸುತ್ತಿರುವ ಆರೋಪಿತನ ಪರಿಚಯ ಇರುತ್ತದೆ. ನನಗೆ ಇಬ್ಬರು ಮಕ್ಕಳಿರುತ್ತಾರೆ. ಅವರಲ್ಲಿ ಗಂಡು ಮಗ ಕಾರ್ತಿಕ ರಾಜ್ ಎಂದು ಆಗಿದ್ದು, ಇನ್ನೋರ್ವ ಮಗಳು ಚಾ.ಸಾ.15 ಆಗಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತನು ನಾನು ನಡೆಸುತ್ತಿರುವ ಲಲಿತ ಇಂಟರ್ ನ್ಯಾಶನಲ್ ಶಾಲೆಯಲ್ಲಿ ಬಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ತದನಂತರ ನನ್ನ ಹೆಂಡತಿಯ ತಮ್ಮನ ಕಾರಿಗೆ ಚಾಲಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದನು. ಆ ಸಮಯದಲ್ಲಿ ಆರೋಪಿತನು ನನ್ನ ಮಗಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬಂದು ಮಾಡುತ್ತಿದ್ದ. ತದನಂತರ ನನ್ನ ಮಗಳು ನಮ್ಮ ಬಳಿ ಆರೋಪಿತನು ತನ್ನನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದಾನೆ ಎಂದು ಹೇಳಿರುತ್ತಾಳೆ. ನಂತರ ನಾನು ಅವರ ಮಾವನನ್ನು ಕರೆಯಿಸಿ ಆರೋಪಿತನಿಗೆ ಬುದ್ದಿವಾದ ಹೇಳಿ ನಂತರ ನಮ್ಮ ಮನೆಯ ಕೆಲಸದಿಂದ ತೆಗೆದುಹಾಕಿರುತ್ತೇನೆ. ಅಲ್ಲದೇ ಆತನ ಮಾವ ಕೂಡ ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಆತನನ್ನು ಕೂಡ ಕೆಲಸದಿಂದ ತೆಗೆದುಹಾಕಿರುತ್ತೇನೆ.

ತದನಂತರ ನಾನು ನನ್ನ ಮಗಳನ್ನು ತಮಿಳು ನಾಡಿನ ತಿರುವಟ್ಟಾರ್ ಎಂಬ ಸ್ಥಳದ ಓರ್ವ ವೈದ್ಯರಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. ಮದುವೆಯಾದ ಬಳಿಕ ನನ್ನ ಮಗಳು ತಮಿಳುನಾಡಿನಲ್ಲಿ ಇರುವ ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಳು. ನನ್ನ ಮಗಳು ಗಂಡನ ಮನೆಯಲ್ಲಿ ಇರುವ ಸಮಯದಲ್ಲಿ ಆಕೆಗೆ ಒಂದು ಗಂಡು ಮಗು ಜನಿಸಿದ್ದು, ಆ ಸಮಯದಲ್ಲಿ ನನ್ನ ಮಗಳಿಗೆ ಆರೋಪಿತನು ಬೆದರಿಕೆ ಹಾಕಿದ್ದಾನೆ ಎಂದು ಮಾಹಿತಿ ತಿಳಿದಿರುತ್ತದೆ. ಆ ರೀತಿ ಬೆದರಿಕೆಯನ್ನು ಆರೋಪಿತನು ವಾಟ್ಸ್ ಆಪ್ ಮೂಲಕ ತನ್ನ ಕೈಗಳನ್ನು ಕೊಯ್ದು ಕೊಂಡ ರೀತಿಯಲ್ಲಿ ಇರುವ ಚಿತ್ರಗಳನ್ನು ಹಾಗೂ ಅರಳಿಮರದ ಕೆಳಗಡೆ ನಿಂತು ಅದರ ವಿಷದ ಹಣ್ಣುಗಳನ್ನು ನಿನ್ನ ಹೆಸರು ಬರೆದಿಟ್ಟು ತಿಂದು ಸಾಯುತ್ತೇನೆ ಎಂದು ನನ್ನ ಮಗಳಿಗೆ ಬೆದರಿಕೆ ಹಾಕುತ್ತಿರುವ ವಿಷಯ ತಿಳಿದುಬಂದಿರುತ್ತದೆ. ಆ ಸಮಯದಲ್ಲಿ ನಾನು ಆರೋಪಿತನ ಮಾವನನ್ನು ಕರೆಯಿಸಿ ಪುನಃ ಆತನಿಗೆ ಈ ಎಲ್ಲಾ ವಿಷಯಗಳನ್ನು ತಿಳಿಸಿದ್ದು, ಆಗ ಆರೋಪಿತನ ಮಾವ ನಮ್ಮ ಬಳಿ ತಾನು ಇನ್ನು ಮುಂದೆ ನೋಡಿಕೊಳ್ಳುತ್ತೇನೆ ಹಾಗೂ ಆರೋಪಿತನು ನನ್ನ ಮಗಳ ಸುದ್ದಿಗೆ

ಬಾರದಂತೆ ನೋಡಿಕೊಳ್ಳುತ್ತೇನೆ ಎಂದು ಹೇಳಿರುತ್ತಾನೆ.

ನಂತರ 2021 ರ ಜೂನ್ ತಿಂಗಳಿನಲ್ಲಿ ನನ್ನ ಮಗಳು ಆಕೆಯ ಮಗನನ್ನು ಕರೆದುಕೊಂಡು ನಮ್ಮ ಮನೆಗೆ ಬಂದಿರುತ್ತಾಳೆ. ಆ ರೀತಿ ಮನೆಗೆ ಬಂದವಳು ನಮ್ಮ ಮನೆಯ ಹಿಂದೆ ಇರುವ ಪಾರ್ಕಿನಲ್ಲಿ ಪ್ರತಿನಿತ್ಯ ಸಂಜೆಯ ಸಮಯದಲ್ಲಿ ವಾಕಿಂಗ್ ಗೆ ಹೋಗುತ್ತಿದ್ದಳು. ನಂತರ ದಿಃ 16-07-2021 ರಂದು ನನ್ನ ಮಗಳು ಆ ರೀತಿ ವಾಕಿಂಗ್ ಗೆ ಹೋದವಳು ವಾಪಾಸು ಮನೆಗೆ ಬಂದಿರುವುದಿಲ್ಲ. ನಂತರ ನಾವೆಲ್ಲರೂ ನನ್ನ ಮಗಳನ್ನು ನಮ್ಮ ಸಂಬಂಧಿಕರ ಮನೆಗಳಲ್ಲಿ ಹಾಗೂ ಇತರೆ ಎಲ್ಲಾ ಕಡೆ ಹುಡುಕಿದರೂ ಕೂಡ ಅವಳು ಸಿಕ್ಕಿರುವುದಿಲ್ಲ. ನಂತರ ಮರುದಿನ 18-07-2021 ರಂದು ಠಾಣೆಗೆ ಹೋಗಿ ನನ್ನ ಮಗಳು ಕಾಣೆಯಾಗಿದ್ದಾಳೆ ಎಂದು ಮಾಹಿತಿ ನೀಡಿರುತ್ತೇನೆ. ಸದರಿ ಮಾಹಿತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ತದನಂತರ ಪೋಲೀಸರು ನನ್ನ ಮಗಳನ್ನು ಆರೋಪಿತನ ಜೊತೆ ಮದ್ಯಪ್ರದೇಶದ ಕಂಡವಾ ಎಂಬ ಪೋಲೀಸ್ ಠಾಣೆಯಲ್ಲಿ ವಶಕ್ಕೆ ಪಡೆದಿದ್ದು, ನಂತರ ದಿಃ 21-07-2021 ರಂದು ದಾವಣಗೆರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಆ ಸಮಯದಲ್ಲಿ ನಾನು ನನ್ನ ಮಗಳನ್ನು ವಿಚಾರಿಸಲು ಪ್ರಯತ್ನಿಸಿದ್ದು, ಅವಳು ಮಾನಸಿಕ ಖಿನ್ನತೆಯಿಂದ ಇರುವುದನ್ನು ಪರಿಗಣಿಸಿ ಅವಳನ್ನು ಸಿಜೆ ಆಸ್ಪತ್ರೆಗೆ ಪೋಲೀಸರು ದಾಖಲುಪಡಿಸಿದ್ದು, ನಂತರ ಅಲ್ಲಿ ವೈದ್ಯಾಧಿಕಾರಿಗಳ ಸಮಕ್ಷಮ ಅವಳನ್ನು ವಿಚಾರಿಸಿದಾಗ ನನ್ನ ಮಗಳು ಸದರಿ ದಿನ ನಾನು ವಾಕಿಂಗ್ ಗೆ ಹೋಗುವ ಪೂರ್ವದಲ್ಲಿ ಆರೋಪಿತನು ರೂ.2 ಲಕ್ಷ ತೆಗೆದುಕೊಂಡು ಬಾ ನಾನು ನಿನ್ನ ಸುದ್ದಿಗೆ ಬರುವುದಿಲ್ಲ ಎಂದು ಹೇಳಿದ್ದ ವಿಷಯವನ್ನು, ಮುಂದುವರೆದು ನೀನು ಹಣ ತರದೇ ಇದ್ದರೆ ನಮ್ಮಿಬ್ಬರ ಪ್ರೀತಿಯ ವಿಷಯವನ್ನು ಎಲ್ಲಾ ಸಂಬಂಧಿಕರಿಗೂ ಹೇಳಿ ನಿನ್ನ ವಿವಾಹ ವಿಚ್ಛೇದನೆ ಆಗುವ ರೀತಿಯಲ್ಲಿ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುವುದಾಗಿ ತಿಳಿಸಿರುತ್ತಾಳೆ. ನಂತರ ತಾನು ಮನೆಯಿಂದ 2 ಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡು ಹೋಗಿದ್ದು, ಆಗ ಆರೋಪಿತನು ತನ್ನನ್ನು ತಾನು ತಂದ ಕಾರಿನಲ್ಲಿ ಕರೆದುಕೊಂಡು ರಾಣೆಬೆನ್ನೂರಿಗೆ ಕರೆದುಕೊಂಡು ಹೋಗಿರುವುದಾಗಿ ಹೇಳಿರುತ್ತಾಳೆ. ನಂತರ ನನ್ನ ಮಗಳು ಮುಂದುವರೆದು ಆರೋಪಿತನು ತನ್ನನ್ನು ಬೆದರಿಸಿ ಬಸ್ಸಿನ ಮೂಲಕ ಬೆಳಗಾವಿಗೆ ಕರೆದುಕೊಂಡು ಹೋಗಿರುವ ಕುರಿತಾಗಿಯೂ ನಂತರ ಬೆಳಗಾವಿನ ಶೀತಲ ಲಾಡ್ಜ್ ನಲ್ಲಿ ತನ್ನನ್ನು ಇಟ್ಟಿರುವುದಾಗಿಯೂ ಹಾಗೂ ಶೀತಲ್ ಲಾಡ್ಜ್ ಗೆ ರೂಮನ್ನು ಪಡೆಯಲು ತನ್ನ ಆಧಾರ್ ಕಾರ್ಡನ್ನು ಬಳಸಿರುವುದಾಗಿಯೂ ನನ್ನ ಮಗಳು ಹೇಳಿರುತ್ತಾಳೆ.

ಮುಂದುವರೆದು ನನ್ನ ಮಗಳು ಸದರಿ ರೂಮಿನಲ್ಲಿ ಆರೋಪಿತನು ನಾನು ಹೇಳಿದಂತೆ ಸಹಕರಿಸಬೇಕು ಇಲ್ಲದಿದ್ದರೆ ನಿನ್ನ ಮಗನನ್ನು ಹಾಗೂ ನಿನ್ನ ಮನೆಯವರನ್ನು ಏನಾದರೂ ಮಾಡುತ್ತೇನೆ, ಅಲ್ಲದೇ ನಿನ್ನ ಗಂಡನಿಗೆ ನೀನು ನನ್ನ ಜೊತೆಯಲ್ಲಿ ಇರುವುದಾಗಿ ಹೇಳಿ ನಿನ್ನ ಸಂಸಾರಕ್ಕೆ ತೊಂದರೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುವುದಾಗಿ ಹೇಳಿ ತನ್ನ ಮೇಲೆ ಅತ್ಯಾಚಾರ ಮಾಡಿರುತ್ತಾನೆ ಎಂದು ಹೇಳಿರುತ್ತಾಳೆ. ನಂತರ ನನ್ನ ಮಗಳು ಮುಂದುವರೆದು ಮರುದಿನ ತಾನು ಮನೆಗೆ ಹೋಗುತ್ತೇನೆ ಎಂದು ಹೇಳಿದರೂ ಕೂಡ ಆರೋಪಿತನು ಅವಳಿಗೆ ಬೆದರಿಕೆ ಹಾಕಿ ಟ್ರೈನಿನ ಮುಖಾಂತರ ದೆಹಲಿಗೆ ಕರೆದುಕೊಂಡು ಹೋಗಿರುತ್ತಾನೆ ಎಂದು ಹೇಳಿರುತ್ತಾಳೆ. ಮುಂದುವರೆದು ನನ್ನ ಮಗಳು ತನ್ನನ್ನು ಆ ರೀತಿಯಾಗಿ ಕರೆದುಕೊಂಡು ಹೋಗುವಾಗ ಕಂಡವಾ ಸ್ಟೇಶನ್ ಬಳಿ ಪೋಲೀಸರು ನಮ್ಮಿಬ್ಬರನ್ನು ವಶಕ್ಕೆ ಪಡೆದಿದ್ದಾರೆ ಎಂದು ಹೇಳಿರುತ್ತಾಳೆ.

ಆ ರೀತಿ ನನ್ನ ಮಗಳು ಹೇಳಿದ ನಂತರ ಸಿಜೆ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ನನ್ನ ಮಗಳ ದೇಹವನ್ನು

ಪರೀಕ್ಷಿಸಿರುತ್ತಾರೆ. ನಂತರ ನನ್ನ ಮಗಳು ಧರಿಸಿದ್ದ ಬಟ್ಟೆಗಳನ್ನೆಲ್ಲಾ ವೈದ್ಯಾಧಿಕಾರಿಗಳು ಸ್ವಾಧೀನಪಡಿಸಿಕೊಂಡಿರುತ್ತಾರೆ.

ನನ್ನ ಮಗಳಿಂದ ಪಡೆದುಕೊಂಡ 2 ಲಕ್ಷ ರೂಪಾಯಿ ಹಣದಲ್ಲಿ ಆರೋಪಿತನು ಕೆಲವು ಹಣವನ್ನು ಖರ್ಚು ಮಾಡಿದ್ದು, ಉಳಿದ ರೂಪಾಯಿ 30 ಸಾವಿರ ಹಣವನ್ನು ಪೋಲೀಸರು ವಶಕ್ಕೆ ಪಡೆದಿರುತ್ತಾರೆ. ನಂತರ ನಾನು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಸದರಿ ಹಣವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ನಂತರ ನನ್ನ ಮಗಳನ್ನು ಮುಂದಿನ ವಿಚಾರಣೆಗಾಗಿ ಪೋಲೀಸರು ಕರೆದುಕೊಂಡು ಬರುವಂತೆ ನನಗೆ ತಿಳಿಸಿದ್ದು, ಆಗ ನಾನು ಆ ಪೂರ್ವದಲ್ಲಿ ನನ್ನ ಮಗಳನ್ನು ಅವಳು ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಕುರಿತಾಗಿ ವೈದ್ಯಾಧಿಕಾರಿಗಳಲ್ಲಿ ಚಿಕಿತ್ಸೆ ಕೊಡಿಸುತ್ತಿರುವುದಾಗಿ ಹಾಗೂ ತದನಂತರ ಆಕೆಯ ಹೇಳಿಕೆಯನ್ನು ಪಡೆದುಕೊಳ್ಳಬೇಕಾಗಿ ವಿನಂತಿಸಿ ಒಂದು ವರದಿಯನ್ನು ಪೋಲೀಸರಿಗೆ ದಿಃ 10-08-2021 ರಂದು ನೀಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ನಾನು ಠಾಣೆಯಲ್ಲಿ ನನ್ನ ಹಣವನ್ನು ನ್ಯಾಯಾಲಯದ ಆದೇಶದಂತೆ ಪಡೆದುಕೊಂಡಿದ್ದು, ಆ ಸಮಯದಲ್ಲಿ ಪೋಲೀಸರು ಅವುಗಳನ್ನು ಪೋಟೋ ತೆಗೆದಿದ್ದು, ಅದರಲ್ಲಿರುವ ಹಣವು ನನ್ನದೇ ಆಗಿರುತ್ತದೆ. ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿಪರ ವಕೀಲರಿಂದ.

ಈ ಹಂತದಲ್ಲಿ ಈಗಾಗಲೇ ನ್ಯಾಯಾಲಯವು ಚಾ.ಸಾ.1, 15 ಮತ್ತು 16 ರವರ ಮುಖ್ಯ ವಿಚಾರಣೆ ಮುಗಿದ ನಂತರ ಪಾಟೀಸವಾಲನ್ನು ಮಾಡುವುದಾಗಿ ಹೇಳಿದ ಅರ್ಜಿಗೆ ಸಮ್ಮತಿಸಿರುವ ಕಾರಣ ಚಾ,ಸಾ.15 ಮತ್ತು 16 ರವರ ಮುಖ್ಯ ವಿಚಾರಣೆಯ ನಂತರ ಪಾಟೀಸವಾಲಿಗಾಗಿ ಮುಂದೂಡಲಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.